ಆವೃತ್ತಿಯು ಹೆಚ್ಚು ಪರಿಗಣಿಸಿದಲ್ಲಿ ಇದರ ಪ್ರೌಢತೆ ಹೆಚ್ಚುವುದರಲ್ಲಿ ಅನುಮಾನವಿಲ್ಲ. 'ಕಲಾವಿದರ ಜೀವನದ ಸರಳ ವಿವರಣೆಯೂ ವಿಮರ್ಶೆಯೇ ಆಗಿದೆ' (ಪುಟ 171) ಎಂಬ ಅವರ ಹೇಳಿಕೆಯೊಂದಿಗೆ, 'ಕೇವಲ ವಿಷಯದ ನಿರೂಪಣಾತ್ಮಕ ಬರಹಗಳಾಗಿರದೆ, ಕೆಲವೊಮ್ಮೆ ವಿಮರ್ಶಾತ್ಮಕವಾಗಿ ರಚಿಸಲ್ಪಟ್ಟಿವೆ ಎಂಬ ಅಂಶಗಳನ್ನೂ' (ಪುಟ 170) ವಾಕ್ಯವು ನಿಲುವುಗಳ ದೃಷ್ಟಿಯಿಂದ ಡೀ ಕೊಡುತ್ತವೆ. ಆದರೆ, 'ಅಂತೆಯೇ ಕಲೆಯಲ್ಲಿ ತಾತ್ವಿಕ ಮತ್ತು ರಾಚನಿಕ ಎಂಬ ವಿಭಾಗೀಕರಣ ಅಸಿಂಧುವಾದುದು ಎನ್ನಬಹುದು' (ಪುಟ 168) ಎಂಬ ವಾಕ್ಯವನ್ನೂ ಇವೆರಡರೊಂದಿಗೆ ಬೆರೆಸಿದಾಗ, ಈ ಮೂರೂ ವಾಕ್ಯಗಳು ತಮ್ಮಗಳ ನಡುವೆ ಸೃಷ್ಟಿಮಾಡುವ ವೈರುಧ್ಯ, ವಾಗ್ವಾದ ಮತ್ತು ತತ್ಪರಿಣಾಮವಾದ ಹೊಳಹುಗಳು ಶಿವಾನಂದರ ಹೊಸದಾದ ಮತ್ತೊಂದು ಪುಸ್ತಕಕ್ಕೆ ದಾರಿಮಾಡಿಕೊಡಬಹುದಾಗಿದೆ. ಶಿವಾನಂದ ಬಂಟನೂರರು ಲೇಖನ ಹಾಗೂ ಲೇಖಕರೊಂದಿಗೆ ಒಮ್ಮತವಿಲ್ಲದಾಗ, ಸ್ವಲ್ಪವೇ ಕಾಲೆಳೆಯುತ್ತಾರೆ. ಮೆಚ್ಚುವಾಗ ಬಹಳ ಉದಾರವಾದಿಯೂ ಆಗಿಬಿಡುತ್ತಾರೆ. ಇನ್ನೂ ಜೀವಂತವಿರುವ ಸಂದರ್ಭವನ್ನು ಐತಿಹಾಸಿಕಗೊಳಿಸುವ ಯತ್ನದಲ್ಲಿ ಇಂತಹ ಉಪಾಯಗಳ ಶೋಧನೆ ಸಹಜ ಹಾಗೂ ಕೆಲವೊಮ್ಮೆ ಅನಿವಾರ್ಯವೂ ಹೌದಾಗಿದೆ. ಯಾರ ಕುರಿತು ಬರೆಯುತ್ತಿದ್ದೇವೆಯೋ ಅಂತಹವರೊಂದಿಗೆ ಇನ್ನೂ ಬದುಕಬೇಕಾದಾಗ ಅಂತಹವರನ್ನು ವ್ಯಾಖ್ಯೆಗೊಡ್ಡುವ ಕೆಲವು ಉಪಾಯಗಳ ಸೂಚನೆ ಈ ಪುಸ್ತಕದಲ್ಲಿದೆ.

***

ಗೆಳೆಯ ಶಿವಾನಂದರ ಈ ಪುಸ್ತಕ ಅನೇಕ ಹೊಸತುಗಳನ್ನು ಹುಟ್ಟುಹಾಕಿದೆ: ಕಲೆಯ ಕುರಿತಾದ ಕನ್ನಡದ ಬರವಣಿಗೆಗಳು ಇಂಗ್ಲಿಷ್ ಬರವಣಿಗೆಗಳ ನೆರಳುಗಳು ಎಂದು ಮಾತ್ರ ಪರಿಗಣಿಸಲಾಗುತ್ತಿತ್ತು, ಇತ್ತೀಚಿನವರೆಗೂ. ಈ ಪುಸ್ತಕ ಆ ಮಿತಿಯನ್ನು ದಾಟುತ್ತದೆ. ತನ್ನದೇ ಸ್ವತಂತ್ರ ಪಥ್ಯವೆಂಬ ನೆಲೆಯನ್ನು ಸ್ಥಾಪಿಸಿಕೊಳ್ಳುತ್ತದೆ. ಗಿರಡ್ಡಿ ಗೋವಿಂದರಾಜ ಅವರು ಪ್ರತಿಪಾದಿಸುತ್ತಿದ್ದ 'ವಿಮರ್ಶೆ ಸ್ವತಃ ಒಂದು ಸ್ವತಂತ್ರ ಸಂಕಥನವಾಗಬೇಕು' ಎಂಬ ವಾದವನ್ನು ಪುಷ್ಟೀಕರಿಸುತ್ತದೆ. ಯಾವುದೇ ಸಿದ್ಧಸೂತ್ರವನ್ನು ಸಹ ಒತ್ತಾಯ ಮಾಡುವುದಿಲ್ಲ. ವಿಶ್ವವಿದ್ಯಾಲಯದ ಪ್ರೊಫೆಸರ್ ಆದವರಿಗಂತೂ ಹೀಗೆ ಅವಕಾಶವಾದಾಗ ಸೂತ್ರವೊಂದನ್ನು ಒತ್ತಾಯ ಮಾಡದೆ ಉಳಿವುದು ಬಹು ಕಷ್ಟದ ಕೆಲಸ. ತೆರೆದಪಥ್ಯದ ಗುಣಲಕ್ಷಣ ಇಲ್ಲಿದೆ. ಈ ಪುಸ್ತಕದಲ್ಲಿ ಶಿವಾನಂದರು ಎಷ್ಟು ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೋ, ಅಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚಾಗಿ ಇತರೆ ಬರಹಗಾರರ ಬರವಣಿಗೆಗಳನ್ನೂ ಪ್ರಸ್ತುತಪಡಿಸುತ್ತಾರೆ. ಇದಕ್ಕೆ ಕನ್ನಡದ್ದೇ ಐತಿಹಾಸಿಕ ಹಿನ್ನೆಲೆಯಿದೆ. ಇವರು ಉದ್ಧರಿಸಿರುವ ಲೇಖನ, ಪುಸ್ತಕಗಳೆಲ್ಲವೂ ಈಗ ಅಲಭ್ಯವಾಗಿ ಅಪರೂಪದ್ದಾಗಿವೆ. ಇದು ವಿಮರ್ಶೆಗಲ್ಲದೆ ಕೃತಿಗೂ ಸಲ್ಲುವ ಕರ್ನಾಟಕ ದೃಶ್ಯಕಲೆಯ ಗುಣ – ನಾವು ದಾಖಲೆಗಳ ವೀರರಲ್ಲ, ನಮ್ಮ ಕಲಾವಿದರುಗಳು ಸಂಗ್ರಾಹ್ಯವಾಗಿ, ವಿಷಯವಾಗಿ, ಸಾಕ್ಷಿಯಾಗಿ, ಕೃತಿಗಳಾಗಿ ಮತ್ತು ಮನೋಭಾವದಲ್ಲಿ ಇಂದಿಗೂ ಒಂದೆಡೆ ಸಿಕ್ಕಿದ್ದಿಲ್ಲ. ಅದಕ್ಕೆ ಈ ಪುಸ್ತಕ ಹೊರತು.

***

ಕನ್ನಡದಲ್ಲಿ ಕಲೆಯ ಕುರಿತಾದ ಬರವಣಿಗೆಗಳು ಎರಡು ರೀತಿಯವು: ಅರ್ಥವಾಗದ್ದು, ಅರ್ಥವಿಲ್ಲದ್ದು. ಈ ಎರಡು ರೀತಿಯನ್ನು ಬೊಟ್ಟುಮಾಡಿ ತೋರಿಸುವವರೂ ಸಹ ಎರಡರಲ್ಲಿ ಒಂದಿಲ್ಲೊಂದು ರೀತಿ ಬರೆವ ಕನ್ನಡದ ಕಲಾ ಬರಹಗಾರರೇ. ಇವೆರಡನ್ನೂ ಮತ್ತು ಇಂತಹವನ್ನು ಬಹುವಾಗಿ 'ಅರ್ಥೈಸಬಹುದಾದ' ಮಟ್ಟಕ್ಕೆ ತಂದು ನಿಲ್ಲಿಸಿರುವ ಪುಸ್ತಕವಿದು. ಸಾಧ್ಯವಾದಷ್ಟೂ ಹೊರನಿಂತು, ದೂರದೃಷ್ಟಿಯಿಂದ, ಎಲ್ಲವನ್ನೂ ಎಲ್ಲರನ್ನೂ ಒಟ್ಟಿಗೆ ಒಂದು ಚೌಕಟ್ಟಿಗೆ ತಂದು ಅವರುಗಳೇ ಸ್ವತಃ ಒಪ್ಪುವಂತೆ ನಿಲ್ಲಿಸಿ, ಬಹುಪಾಲು ಪರಿಚಯ, ಅದರಷ್ಟೇ ಆಯಾ ಪಥ್ಯಗಳಲ್ಲಿ ಮೆಚ್ಚಿದ ವಾಕ್ಯ–ಪುಟಗಳ ಪುನರುಚ್ಚಾರಣೆ ಮಾಡಿ, ವಿಶ್ಲೇಷಣೆ–ವಿಮರ್ಶೆಯನ್ನು ಆದಷ್ಟು ಕನಿಷ್ಠಗೊಳಿಸಿ, ಹಿರಿ ಕಿರಿಯರೆಂಬ ವರ್ಗೀಕರಣವನ್ನು ತೆಗೆದು ಹಾಕದೆ, ಅಂತಹ ಕಲಾವಿದ–ಬರಹಗಾರರ ಕೊಡುಗೆಗಳನ್ನು ಒಟ್ಟಾಗಿ ಹೆಣಿಗೆ ಹಾಕಿ, ವರ್ಣಮಯ ಕೌದಿಯೊಂದರೋಪಾದಿಯಲ್ಲಿ ನಿರೂಪಗೊಂಡಿರುವ ಪುಸ್ತಕವಿದು. ●